ಪದವಿ ಕಾಲೇಜುಗಳು

1444(2379); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿ ಪದವಿ ಶಿಕ್ಷಣ ನೀಡುತ್ತಿರುವ ಕಾಲೇಜುಗಳ ಜಿಲ್ಲಾವಾರು ಸಂಖ್ಯೆ ಎಷ್ಟು; ಪದವಿ ಕೋರ್ಸ್‌ಗಳ ದಾಖಲಾತಿ ಕಡಿಮೆ ಅಥವಾ ಹೆಚ್ಚಳದ ವಿವರಗಳೇನು;

ಆ) ಎಷ್ಟು ಕಾಲೇಜುಗಳಲ್ಲಿ ನಿಗಧಿತ ಸಂಖ್ಯೆಗಿಂತಕಡಿಮೆ ಪ್ರಮಾಣದಲ್ಲಿ ವಿದ್ಯಾರ್ಥಿಗಳಿದ್ದಾರೆ;

ಇ) ಪದವಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ರೂಪಿಸಿರುವ ಕಾರ್ಯಕ್ರಮ, ನೈಪುಣ್ಯ ನಿಧಿ ಕುರಿತಾದ ವಿವರಗಳೇನು;

ಈ) ಸರ್ಕಾರ ಹಮ್ಮಿಕೊಂಡ ಇನ್ನಿತರ ಪ್ರೋತ್ಸಾಹಕ ಯೋಜನೆಗಳು ಮತ್ತು ಆಧುನಿಕ ಶೈಕ್ಷಣಿಕ ನಿಟ್ಟಿನಲ್ಲಿ ಕಾರ್ಯ ಯೋಜನೆಗಳು ಯಾವುವು?

. **ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)**

ಅ) ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ 411 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಜಿಲ್ಲಾವಾರು ಸಂಖ್ಯೆ ಈ ಕೆಳಕಂಡಂತಿವೆ.

ಕ್ರ.ಸಂ.	ಜಿಲ್ಲೆ	ಕಾಲೇಜುಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ
1	ಬೆಂಗಳೂರು ನಗರ	21	24664
2	ಬೆಂಗಳೂರು ಗ್ರಾಮಾಂತರ	8	5445
3	ರಾಮನಗರ	11	7261
4	ಕೋಲಾರ	9	11996
5	ಚಿಕ್ಕಬಳ್ಳಾಪುರ	9	9487
6	ತುಮಕೂರು	20	20755
7	ಮೈಸೂರು	23	21385

8	ಚಾಮರಾಜನಗರ	9	4350
9	ಮಂಡ್ಯ	15	11352
10	ಹಾಸನ	27	14376
11	ಶಿವಮೊಗ್ಗ	16	14918
12	ಚಿತ್ರದುರ್ಗ	14	10737
13	ದಾವಣಗೆರೆ	11	12455
14	ಚಿಕ್ಕಮಗಳೂರು	14	11551
15	ದಕ್ಷಿಣ ಕನ್ನಡ	19	9613
16	ಉಡುಪಿ	12	9879
17	ಕೊಡಗು	6	2480
18	ಧಾರವಾಡ	9	4782
19	ಗದಗ	10	4666
20	ಹಾವೇರಿ	13	7084
21	ಉತ್ತರ ಕನ್ನಡ	15	12960
22	ಬೆಳಗಾವಿ	21	10188
23	ಬಾಗಲಕೋಟೆ	16	5725
24	ಬಿಜಾಪುರ	11	5003
25	ಗುಲ್ಬರ್ಗಾ	16	9825
26	ಯಾದಗಿರಿ	7	5566
27	ರಾಯಚೂರು	12	7581
28	ಕೊಪ್ಪಳ	14	4751
29	ಬಳ್ಳಾರಿ	14	9329
30	ಬೀದರ್	9	4633
ಒಟ್ಟು		**411**	**294797**

ಆ) ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಿಗಧಿತ ಸಂಖ್ಯೆಯನ್ನು ನಿಗಧಿಪಡಿಸಿರುವುದಿಲ್ಲ.

ಇ)

¬ **'ಸಂವಹನ ಕೌಶಲ್ಯ' (Communication Skill) ತರಬೇತಿ:**

ಸದರಿ ಕಾರ್ಯಕ್ರಮದಡಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ 'ಸಂವಹನ ಕೌಶಲ್ಯ' (Communication Skill) ತರಬೇತಿ ಕಾರ್ಯಕ್ರಮವನ್ನು ICT ಬಳಸಿಕೊಳ್ಳುವ ಮೂಲಕ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಒಟ್ಟು 100 ಗಂಟೆಗಳ ಅವಧಿಯ Spoken English ಕಾರ್ಯಕ್ರಮದ ಅಡಕ ಮುದ್ರಿಕೆಗಳು ಈ ಇಲಾಖೆಯಲ್ಲಿ ಲಭ್ಯವಿದ್ದು ಇವುಗಳನ್ನು ಕಾಲೇಜುಗಳಲ್ಲಿರುವ ಕಂಪ್ಯೂಟರ್ ಮತ್ತು ಎಲ್.ಸಿ.ಡಿ. ಪ್ರೊಜೆಕ್ಟರ್‌ಗಳನ್ನು ಬಳಸಿ Virtual Classes ಮೂಲಕ ತರಬೇತಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

¬ **ಸಾಮಾಜಿಕ ಕೌಶಲ್ಯ ಮತ್ತು ವಿಶ್ಲೇಷಣಾ ಕೌಶಲ್ಯಗಳ (Social Skills and Analytical Skills) ತರಬೇತಿ:**

ದ್ವಿತೀಯ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಸದರಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಹಾಗೂ Infosys ನಲ್ಲಿ ತರಬೇತುಗೊಂಡ ಸರ್ಕಾರಿ ಕಾಲೇಜುಗಳ ಉಪನ್ಯಾಸಕರು ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ವಾರಕ್ಕೆ ಎರಡು ಗಂಟೆಗಳ ತರಬೇತಿ ನೀಡುವ ಮೂಲಕ ಈ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಲಾಗಿದೆ.

IIT Mumbai ರೂಪಿಸಿರುವ 'ICT ಮೂಲಕ Spoken Tutorial programme' ಅನುಷ್ಠಾನಗೊಳಿಸಿ Open Source Software ಗಳ ಬಳಕೆಯ ಕುರಿತ ಉಚಿತ ತರಬೇತಿಯನ್ನೂ ಸಹ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ.

¬ ಉದ್ಯೋಗ ಕೌಶಲ್ಯ ತರಬೇತಿ (Job Skills):

ತೃತೀಯ ವರ್ಷದ ಪದವಿ ವಿದ್ಯಾರ್ಥಿಗಳಿಗೆ NSDC ಯಿಂದ ವಿವಿಧ ವಲಯ ನಿರ್ದಿಷ್ಟ ಕೌಶಲ್ಯಗಳಲ್ಲಿ ಉದ್ಯೋಗ ಕೌಶಲ್ಯ ತರಬೇತಿಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.

ಈ) 2015–16ನೇ ಸಾಲಿನ ಪದವಿ ವಿದ್ಯಾರ್ಥಿಗಳಿಗೆ ಸಹಭಾಗಿತ್ವ ಹಾಗೂ ಸ್ವಾವಲಂಬನೆ ಎಂಬ ಎರಡು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ಪ್ರಗತಿ

1446(2381); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಕಳೆದ ಎರಡು ವರ್ಷಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಆಯ್ಕೆಯಾದ ಗ್ರಾಮಗಳ ಜಿಲ್ಲಾವಾರು ಒಟ್ಟು ಸಂಖ್ಯೆ ಮತ್ತು ಯೋಜನೆಯ ಅನುಷ್ಠಾನ ಕುರಿತಾದ ಪ್ರಗತಿಯ ವಿವರಗಳೇನು;

ಆ) ಸದರಿ ಯೋಜನೆಯಡಿಯಲ್ಲಿ ಗ್ರಾಮಗಳ ಆಯ್ಕೆಗೆ ಸರ್ಕಾರ ಅನುಸರಿಸುತ್ತಿರುವ ಅರ್ಹತಾ ನೀತಿ ನಿಯಮಗಳೇನು;

ಇ) ಯೋಜನೆಯ ಅನುಷ್ಠಾನದಲ್ಲಿ ಸಹಭಾಗಿತ್ವ ನೀಡಿದ ಸರ್ಕಾರೇತರ ಸಂಸ್ಥೆಗಳು ಯಾವುವು;

ಈ) ಈ ಯೋಜನೆಯಡಿಯಲ್ಲಿ ಎರಡು ವರ್ಷಗಳಲ್ಲಿ ಎಷ್ಟು ಗ್ರಾಮಗಳಲ್ಲಿ ಯೋಜನಾ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡಿವೆ;

ಉ) ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಒದಗಿಸಿಕೊಡುವಲ್ಲಿನ ಗುರಿ ಮತ್ತು ಸಾಧನೆಗಳು ಯಾವುವು?